# ಸದ್ದು ಮಾಡಿದ ಬಿರುಗಾಳಿ!



■ ಪ್ರವೀಣ ಕುಲಕರ್ಣಿ

ಚೆಸ್ ಜಗತ್ತಿನಲ್ಲಿ ಹೊಸ ಚಾಂಪಿಯನ್‌ನ ಅವತಾರವಾಗಿದೆ. ಆ ನವತಾರೆಯೇ ಚೀನಾದ ಗ್ರ್ಯಾಂಡ್‌ಮಾಸ್ಟರ್ ಡಿಂಗ್ ಲಿರೆನ್. ಡಿಂಗ್‌ಗೆ ಅವರ ದೇಶದಲ್ಲಿ ಒಂದು ಪ್ರೀತಿಯ ಹೆಸರಿದೆ. 'ಸದ್ದು ಮಾಡದ ಬಿರುಗಾಳಿ' ಎಂದು. ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಅವರು ಒಳನುಗ್ಗಿದ್ದು, ಪ್ರಶಸ್ತಿ ಸುತ್ತಿನವರೆಗೆ ತೂರಿ ಬಂದಿದ್ದು, ಕೊನೆಯ ಚಾಂಪಿಯನ್ ಪಟ್ಟ ಏರಿ ಕುಳಿತಿದ್ದು ಎಲ್ಲವೂ ಬಿರುಗಾಳಿಯಂತೆಯೇ. ಹೌದು, ಇಷ್ಟೊಂದು ವಿಪ್ಲವದ ಸನ್ನಿವೇಶದಲ್ಲಿ ಅವರು ಒಂದಿನಿತೂ ಸದ್ದು ಮಾಡಲಿಲ್ಲ. ಚಾಂಪಿಯನ್ ಪಟ್ಟ ಏರಲು ಹೊರಟವರಿಗೆ ಗುದ್ದು ಕೊಡುವವರು ಇವರು ಎಂದೂ ತೋರಿಸಿಕೊಳ್ಳಲಿಲ್ಲ. ಎಲ್ಲಾ ಸದ್ದಿಲ್ಲದೆ ಮಾಡಿ, 'ರಾಜ'ನ ಸ್ಥಾನದಲ್ಲಿ ವಿರಾಜಮಾನರಾದವರು ಅವರು.

ರಷ್ಯಾದ ಗ್ರ್ಯಾಂಡ್‌ಮಾಸ್ಟರ್ ನಿಪೊಮ್‌ನಿಷಿ ಫೈನಲ್‌ನ ಬಹುಭಾಗ ಒಂದು ಪಾಯಿಂಟ್ ಅಂತರದ ಮುನ್ನಡೆ ಕಾಪಾಡಿಕೊಂಡಿದ್ದರು. ಆದರೆ, 12ನೇ ಪಂದ್ಯವನ್ನು ಚೀನಾದ ಆಟಗಾರ ಬಿಳಿ ಕಾಯಿಗಳಲ್ಲಿ ಆಡಿ ಗೆಲ್ಲುವ ಮೂಲಕ ಸ್ಕೋರ್ ಅನ್ನು ಮೊದಲ ಬಾರಿ 6–6ರಲ್ಲಿ ಸಮ ಮಾಡಿಕೊಂಡಿದ್ದರು. ನಂತರದ ಎರಡು ಪಂದ್ಯಗಳು 'ಡ್ರಾ' ಆಗಿದ್ದವು. ಹಿಂದುಳಿದಿದ್ದ 'ಬಿರುಗಾಳಿ' ಯಾವ ಮಾಯೆಯಲ್ಲೋ ಮುಂದೆ ಬಂತು! 'ಮೊದಲ ಪಂದ್ಯದ ಫಲಿತಾಂಶ ಹೊರಬಿದ್ದಾಗ ನಾನು ಅಕ್ಷರಶಃ ಖಿನ್ನನಾಗಿದ್ದೆ. ಆದರೆ, ನಿಧಾನವಾಗಿ ಚೇತರಿಸಿಕೊಂಡು, ಟ್ರೋಫಿ ಎತ್ತಿ ಹಿಡಿಯುವವರೆಗೆ ಮುನ್ನುಗ್ಗಿದೆ. ಈಗ ಹಿಂದಿರುಗಿ ನೋಡಿದಾಗ ನಾನು ಏರಿದ ಮೆಟ್ಟಿಲುಗಳನ್ನು ಕಂಡು ನನಗೇ ಆಶ್ಚರ್ಯವಾಗುತ್ತದೆ' ಎನ್ನುತ್ತಾರೆ ಲಿರೆನ್. ಚೀನಾದ ಈ ಆಟಗಾರನ ಸಾಧನೆ ಕುರಿತು ಅವರಿಗಷ್ಟೇ ಅಲ್ಲ, ಚೆಸ್ ಪ್ರಿಯರಿಗೆಲ್ಲ ಸೋಜಿಗವೇ. ಏಕೆಂದರೆ, ಚಾಂಪಿಯನ್‌ಷಿಪ್‌ಗೆ ಅವರ ಪ್ರವೇಶವಾಗಿದ್ದೇ ತುಂಬಾ ಆಕಸ್ಮಿಕವಾಗಿ. ರಷ್ಯಾದ ಆಟಗಾರ ಸರ್ಗೈ ಕಾರ್ಯಾಕಿನ್, ತಮ್ಮ ದೇಶ ಉಕ್ರೇನ್ ಮೇಲೆ ಸಾರಿದ ಯುದ್ಧವನ್ನು ಸಮರ್ಥಿಸಿಕೊಂಡು ಮಾತನಾಡಿದ್ದರಿಂದ ನಿಷೇಧಕ್ಕೆ ಒಳಗಾಗಿ ಸರ್ಗೈ ಚಾಂಪಿಯನ್‌ಷಿಪ್‌ನಿಂದ ಹೊರಗುಳಿಯುವಂತಾಯಿತು. ಅವರ ಆ ಸ್ಥಾನವನ್ನು ತುಂಬಿದವರು ಲಿರೆನ್.

ಲಿರೆನ್ ತೋರಿದ ಆರಂಭಿಕ ಪ್ರದರ್ಶನಗಳನ್ನು ಕಂಡ ಯಾರಿಗೂ ಅವರು ಫೈನಲ್‌ನಲ್ಲಿ ಗೆದ್ದು ಟ್ರೋಫಿಗೆ ಮುತ್ತಿಕ್ಕಲಿದ್ದಾರೆ ಎಂದು ಅನಿಸಿರಲಿಲ್ಲ. 'ಸದ್ದು ಮಾಡದ ಬಿರುಗಾಳಿ'ಯ ಆಟ ಮೊದಮೊದಲು ಅಷ್ಟೊಂದು ಸಪ್ಪೆಯಾಗಿತ್ತು. ಆದರೆ, ಮುಂದೆ 'ಬಿರುಗಾಳಿ' ಯಾವ ಪರಿ ಬೀಸಿತೆಂದರೆ ನಿಪೊಮ್‌ನಿಷಿ ಅವರಂತಹ ಆಟಗಾರನೂ ಸೋಲನ್ನು ಒಪ್ಪಿಕೊಳ್ಳಬೇಕಾಯಿತು.

ಕಜಕಿಸ್ತಾನದ ಆಸ್ತಾದಲ್ಲಿ ಉದಯಿಸಿದ ಈ ಹೊಸ ಚಾಂಪಿಯನ್, ವಿಶ್ವ ಚೆಸ್ ಚಾಂಪಿಯನ್‌ಷಿಪ್ ಗೆದ್ದುಕೊಂಡ ಚೀನಾದ ಮೊದಲ ಆಟಗಾರ ಎಂಬ ಹಿರಿಮೆಗೂ ಪಾತ್ರವಾದರು.

ಡಿಂಗ್ ವಿಶ್ವ ಚಾಂಪಿಯನ್ ಆಗುವ ಮೂಲಕ ಮ್ಯಾಗ್ನಸ್ ಕಾರ್ಲ್‌ಸನ್ ಅವರ ಒಂದು ದಶಕದ ಆಧಿಪತ್ಯವೂ ಕೊನೆಗೊಂಡಂತಾಗಿದೆ. ಕಳೆದ ಬಾರಿ, ಅಂದರೆ 2021ರಲ್ಲಿ ದುಬೈನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಾರ್ಲ್‌ಸನ್, ನಿಪೊಮ್‌ನಿಷಿ ಅವರನ್ನು ಸೋಲಿಸಿ ಐದನೇ ಸಲ ವಿಶ್ವ ಕಿರೀಟ ಧರಿಸಿದ್ದರು. ಆದರೆ ಕಳೆದ ವರ್ಷದ ಜುಲೈನಲ್ಲಿ ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಆಡುವ ಪ್ರೇರಣೆ ಕಳೆದುಕೊಂಡಿದ್ದೇನೆ ಎಂದು ಹಠಾತ್ತನೇ ಘೋಷಿಸಿದ್ದರು. ಹೀಗಾಗಿ ನಿಪೊಮ್‌ನಿಷಿ ಅವರಿಗೆ ಲಿರೆನ್ ಅನಿರೀಕ್ಷಿತ ಎದುರಾಳಿಯಾಗಿದ್ದರು. 'ಹೌದು, ನನ್ನ ನಿದ್ದೆ ಹೊರಟುಹೋಗಿದೆ. ಕಣ್ತುಂಬ ನಿದ್ದೆ ಮಾಡಲು ನಿದ್ರೆ ಮಾತ್ರೆ ತೆಗೆದುಕೊಳ್ಳುವುದು ಅನಿವಾರ್ಯವಾಗಿದೆ. ಏಕೆಂದರೆ, ಲಿರೆನ್ ತಂದ ಫಲಿತಾಂಶವೇ ಹಾಗಿದೆ' ಎಂದು ನಿಪೊಮ್‌ನಿಷಿ ಹೇಳುತ್ತಾರೆ.

ಪುರುಷರ ಮತ್ತು ಮಹಿಳೆಯರ ವಿಶ್ವ ಚಾಂಪಿಯನ್ ಕಿರೀಟಗಳು ಎರಡೂ ಈಗ ಚೀನಾ ಬಳಿಯಿದ್ದಂತಾಗಿದೆ. ಹಾಲಿ ಮಹಿಳಾ ವಿಶ್ವ ಚಾಂಪಿಯನ್ ಜು ವೆನ್‌ಜುನ್ ಅವರು ಜುಲೈನಲ್ಲಿ ನಡೆಯುವ ಫೈನಲ್‌ನಲ್ಲಿ ಸ್ವದೇಶದ ಲೀ ಟಿಂಗ್‌ಜೀ ಅವರನ್ನು ಎದುರಿಸಲಿದ್ದಾರೆ. ಆಗ ಯಾರೇ ಗೆದ್ದರೂ ಚಾಂಪಿಯನ್‌ಪಟ್ಟ ಮತ್ತೆ ಚೀನಾ ಬಳಿಯೇ ಉಳಿಯಲಿದೆ.

ವಿಶ್ವ ಚೆಸ್ ರಂಗದಲ್ಲಿ ಚೀನಾದ ಈ ಪಾರಮ್ಯ ದಿಢೀರ್ ಎಂದು ಸಂಭವಿಸಿದ್ದೇನೂ ಅಲ್ಲ. ಬಹು ಹಿಂದೆಯೇ ಶುರು ಮಾಡಲಾಗಿದ್ದ 'ಬಿಗ್ ಡ್ರ್ಯಾಗನ್ ಪ್ರೊಜೆಕ್ಟ್'ನ ಫಲಶ್ರುತಿ ಇದು ಎಂದೇ ವ್ಯಾಖ್ಯಾನಿಸಲಾಗುತ್ತಿದೆ. ಚೀನಾದಲ್ಲಿ ಚೆಸ್‌ಗೆ ಉತ್ತೇಜನ ನೀಡುವ ಈ ಯೋಜನೆ 1974ರಲ್ಲಿ ಶುರುವಾಯಿತು. ಡ್ಯಾಟೊ ಟ್ಯಾನ್ ಚಿನ್ ನ್ಯಾಮ್ ಅವರು ಈ ಯೋಜನೆಗೆ ಬೀಜಾಂಕುರ ಮಾಡಿದವರು. ಚೀನಾದಲ್ಲಿ ಚೆಸ್ ಕಲಿಕೆ ಒಂದು ಆಂದೋಲನದ ರೀತಿಯಲ್ಲಿ ಪ್ರಾರಂಭವಾದ ಕಾಲಘಟ್ಟ ಅದಾಗಿದೆ. ಲಿರೆನ್ ಸಹ ಈ ಆಂದೋಲನದ ಭಾಗವಾಗಿ ಚೆಸ್‌ನ ವಿದ್ಯಾರ್ಥಿಯಾಗಿ ಈಗ ಚಾಂಪಿಯನ್ ಆಗುವ ಮಟ್ಟಕ್ಕೆ ಬೆಳೆದವರು.

ಲಿರೆನ್ ಅವರಿಗೆ ಒಲಿದ ಚಾಂಪಿಯನ್ ಪಟ್ಟ ಭಾರತದಲ್ಲೂ ಒಂದು ರೀತಿಯ ಉತ್ಸಾಹದ ಚಿಲುಮೆ ಪುಟಿದೇಳುವಂತೆ ಮಾಡಿದೆ. ಭಾರತದ ಉದ್ದಗಲಕ್ಕೂ ಓಡಾಡುತ್ತಿರುವ ವಿಶ್ವನಾಥನ್ ಆನಂದ್, 'ನಮ್ಮ ಪಕ್ಕದ ದೇಶದವರು ಚಾಂಪಿಯನ್ ಆಗಿರುವುದು ನಮ್ಮ ಕೆಚ್ಚನ್ನು ಮತ್ತಷ್ಟು ಹೆಚ್ಚಿಸುವಂತೆ ಮಾಡಿದೆ. ಮುಂದಿನ ವರ್ಷ ಲಿರೆನ್‌ಗೆ ಭಾರತೀಯ ಎದುರಾಳಿಯೇ ಚೆಕ್‌ಮೇಟ್ ಮಾಡಬಹುದು. ಆ ಕ್ಷಣಕ್ಕಾಗಿ ಕಾಯೋಣ' ಎನ್ನುತ್ತಾರೆ. ಭಾರತದಲ್ಲೂ ವಿಪುಲವಾಗಿ ಬೆಳೆದಿರುವ ಚೆಸ್ ಪ್ರತಿಭೆಗಳ ಕಡೆಗೊಂದು ಆಸೆಗಣ್ಣಿನ ನೋಟವನ್ನೂ ಅವರು ಬೀರುತ್ತಾರೆ. ಬಿರುಗಾಳಿಯೇನೋ ಈಗ ಚಮತ್ಕಾರ ಮಾಡಿದೆ. ಅದಕ್ಕೆ ತಡೆಯೊಡ್ಡುವ ಯಾವ ಸುಂಟರಗಾಳಿ ಈಗ ಎಲ್ಲಿ ಎದ್ದಿದೆಯೋ? ಉತ್ತರಕ್ಕಾಗಿ ನಾವು ಕಾಯಲೇಬೇಕು. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65